# ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಸಂಖ್ಯೆ. ಬಿಎಮ್ಆರ್‌ಸಿಎಲ್/ 486 ಬಿ /ಎಡಿಎಮ್/2017 /ಪಿಆರ್‌ಜೆ/ಐಟಿ ಅಗಸ್ಟ, 21, 2017

## ಗುತ್ತಿಗೆ ಆಧಾರದ ನೇಮಕಾತಿಗಾಗಿ ಅಧಿಸೂಚನೆ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತವು (ಬಿ.ಎಂ.ಆರ್.ಸಿ.ಎಲ್) ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಒಂದು ಜಂಟಿ ಉದ್ಯಮವಾಗಿದ್ದು, ಇದು ಬೆಂಗಳೂರು ನಗರಕ್ಕೆ ಮೆಟ್ರೋ ರೈಲು ಯೋಜನೆಯ ಅನುಷ್ಠಾನದ ಹೊಣೆಗಾರಿಕೆಯನ್ನು ಹೊತ್ತುಕೊಂಡಿರುವ ಒಂದು ವಿಶೇಷ ವಾಹಕವಾಗಿದೆ.

ಬೆ.ಮೆ.ರೈ.ನಿ ನಿಯಮಿತವು ಗುತ್ತಿಗೆ ಆಧಾರದ ಮೇಲೆ ಯೋಜನೆ ವಿಭಾಗದ ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಅನುಭವಿ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಈ ಹುದ್ದೆಗಳಿಗೆ ವಯೋಮಿತಿಯು ಅರ್ಜಿ ಸಲ್ಲಿಸುವಾಗ 40 ವರ್ಷಗಳಿಗೆ ಮೀರಿರಬಾರದು.

| ಕ್ರ. ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಶೈಕ್ಷಣಿಕ ವಿದ್ಯಾರ್ಹತೆ | ಅನುಭವ |
|---|---|---|---|---|
| 1 | ಸಿಸ್ಟಿಮ್ ಅನಲಿಸ್ಟ್ (ಮಾಹಿತಿ ತಂತ್ರಜ್ಞಾನ) | 1 | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿಧರರು. | VB.NET (Web based application, RDLC Reports, Web services, Ajax & CSS) ಮತ್ತು SQL/PL-SQL (Normalization, DML , DCL, Stored Procedures, views, joins, Cursers, Backups) ದಲ್ಲಿ ಕಡ್ಡಾಯವಾಗಿ ಕನಿಷ್ಠ 8 ವರ್ಷ ತಂತ್ರಾಂಶ ಅಭಿವೃದ್ಧಿಯಲ್ಲಿ (software development) ಅನುಭವ ಹೊಂದಿರಬೇಕು,.<br>ತಂತ್ರಾಂಶ ಅಭಿವೃದ್ಧಿಯಲ್ಲಿ ಈ ಕೆಳಗಿನವುಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕು:<br>ಅಗತ್ಯ ಸಂಗ್ರಹಣೆ ಮತ್ತು ವಿಶ್ಲೇಷಣೆ (Requirement gathering and analysis), ವಿನ್ಯಾಸ(Design), ಅಭಿವೃದ್ಧಿ ಮತ್ತು ಅನುಷ್ಠಾನ (Coding and Implementation) , ಪರೀಕ್ಷೆ ಮತ್ತು ನಿಯೋಜನೆ(Testing and Deployment) ಮತ್ತು ನಿರ್ವಹಣೆ (Maintenance). |
| 2 | ಸಿಸ್ಟಿಮ್ ಅನಲಿಸ್ಟ್ (ಈ.ಆರ್.ಪಿ) | 1 | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿಧರರು. | SQL/PL-SQL(Normalization, DML , DCL, Stored Procedures, views, joins Cursers, Backups) ದಲ್ಲಿ ಕಡ್ಡಾಯವಾಗಿ ಕನಿಷ್ಠ 8 ವರ್ಷ ಈ.ಆರ್.ಪಿ ತಂತ್ರಾಂಶಗಳ ಅಭಿವೃದ್ಧಿಯಲ್ಲಿ ಅನುಭವ ಹೊಂದಿರಬೇಕು<br>ತಂತ್ರಾಂಶ ಅಭಿವೃದ್ಧಿಯಲ್ಲಿ ಈ ಕೆಳಗಿನವುಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕು:<br>ಅಗತ್ಯ ಸಂಗ್ರಹಣೆ ಮತ್ತು ವಿಶ್ಲೇಷಣೆ(Requirement gathering and analysis), ವಿನ್ಯಾಸ(Design), ಅಭಿವೃದ್ಧಿ ಮತ್ತು ಅನುಷ್ಠಾನ (Coding and Implementation) , ಪರೀಕ್ಷೆ ಮತ್ತು ನಿಯೋಜನೆ(Testing and Deployment) ಮತ್ತು ನಿರ್ವಹಣೆ (Maintenance). |

| | | | | |
|---|---|---|---|---|
| 3 | ಪ್ರೋಗ್ರಾಮರ್ (ಮಾಹಿತಿ ತಂತ್ರಜ್ಞಾನ) | 1 | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿಧರರು. | VB.NET (Web based application, RDLC Reports, Web services, Ajax & CSS) ಮತ್ತು SQL/PL-SQL (Normalization, DML , DCL, Stored Procedures, views, joins Cursers, Backups) ದಲ್ಲಿ ಕಡ್ಡಾಯವಾಗಿ ಕನಿಷ್ಠ 3 ವರ್ಷ ತಂತ್ರಾಂಶ ಅಭಿವೃದ್ಧಿಯ(Software Development) ಅನುಭವ ಹೊಂದಿರಬೇಕು,.<br>ತಂತ್ರಾಂಶ ಅಭಿವೃದ್ಧಿಯಲ್ಲಿ ಈ ಕೆಳಗಿನವುಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕು:<br>ಅಭಿವೃದ್ಧಿ ಮತ್ತು ಅನುಷ್ಠಾನ(Coding and implmentation) , ಪರೀಕ್ಷೆ ಮತ್ತು ನಿಯೋಜನೆ(Testing and Deployment) ಮತ್ತು ನಿರ್ವಹಣೆ (Maintenance). |
| 4 | ಪ್ರೋಗ್ರಾಮರ್ (ಈ.ಆರ್.ಪಿ) | 1 | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿಧರರು. | SQL/PL-SQL (Normalization, DML , DCL, Stored Procedures, views, joins Cursers, Backups) ದಲ್ಲಿ ಕಡ್ಡಾಯವಾಗಿ ಕನಿಷ್ಠ 3 ವರ್ಷ ಈ.ಆರ್.ಪಿ ತಂತ್ರಾಂಶಗಳ ಅಭಿವೃದ್ಧಿಯಲ್ಲಿ (Software development) ಅನುಭವ ಹೊಂದಿರಬೇಕು.<br>ತಂತ್ರಾಂಶ ಅಭಿವೃದ್ಧಿಯಲ್ಲಿ ಈ ಕೆಳಗಿನವುಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕು:<br>ಅಭಿವೃದ್ಧಿ ಮತ್ತು ಅನುಷ್ಠಾನ(coding and implmentation) , ಪರೀಕ್ಷೆ ಮತ್ತು ನಿಯೋಜನೆ(Testing and Deployment) ಮತ್ತು ನಿರ್ವಹಣೆ (Maintenance) |

## I. ವೇತನ

| ಹುದ್ದೆಯ ಹೆಸರು | ಸಂಚಿತ ಮಾಹೆಯಾನ ವೇತನ (ರೂ ಗಳಲ್ಲಿ) |
|---|---|
| ಸಿಸ್ಟಿಮ್ ಅನಲಿಸ್ಟ್ | 67,430 |
| ಪ್ರೋಗ್ರಾಮರ್ | 35,910<br>(ಅದಾಗ್ಯೂ ಸೂಕ್ತವೆನಿಸಿದ ಮತ್ತು ಹೆಚ್ಚಿನ ಅನುಭವ ಉಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ವೇತನ ಪರಿಗಣಿಸಬಹುದಾಗಿದೆ) |

ಆಯ್ಕೆಯಾದ ಅಭ್ಯರ್ಥಿಗಳಿಗೆ ಮೇಲಿನ ಸಂಭಾವನೆ ಹೊರತುಪಡಿಸಿ ವೈದ್ಯಕೀಯ ವಿಮಾ, ವೈಯಕ್ತಿಕ ಅಪಘಾತ ವಿಮಾ ಮತ್ತು ಸೂಪರ್ ಅನ್ಯೂಯೇಶನ್ ಕೊಡುಗೆ ಮತ್ತು ಆಯಾ ಹುದ್ದೆಗೆ ಸಂಸ್ಥೆಯಲ್ಲಿ ಜಾರಿಯಲ್ಲಿರುವ ಇತರೆ ಸವಲತ್ತುಗಳಿಗೆ ನಿಗಮದ ನಿಯಮಗಳ ಪ್ರಕಾರ ಅರ್ಹರಾಗಿತ್ತಾರೆ.

## II. ನೇಮಕಾತಿಯ ಗುತ್ತಿಗೆ ಅವಧಿ

1. ಎಲ್ಲಾ ಹುದ್ದೆಗಳಿಗೂ 3 ವರ್ಷಗಳಾಗಿರುತ್ತವೆ. ಅದಾಗ್ಯೂ ಸಂಸ್ಥೆಯ ಅವಶ್ಯಕತೆ ಮತ್ತು ಉದ್ಯೋಗಿಯ ಕಾರ್ಯನಿರ್ವಹಣೆಯನ್ನು ಅನುಸರಿಸಿ ಮುಂದಿನ ಅವಧಿಗೆ ನೇಮಿಸಿಕೊಳ್ಳುವ ಅವಕಾಶವಿರುತ್ತದೆ.

2. ಗುತ್ತಿಗೆ ನೇಮಕಾತಿ ಒಪ್ಪಂದವನ್ನು ನಿಗಮ ಅಥವಾ ಅಭ್ಯರ್ಥಿಯು 90 ದಿನಗಳ ಮೂಂಗಡ ಸೂಚನೆ ನೀಡುವ ಮೂಲಕ ಅಥವಾ ಸೂಚನಾ ಅವಧಿಗೆ ಬದಲಾಗಿ 90 ದಿನಗಳ ಸಂಬಳವನ್ನು ಪಾವತಿಸುವ ಮೂಲಕ ಅಂತ್ಯಗೊಳಿಸಬಹುದಾಗಿರುತ್ತದೆ.

**III. ಷರತ್ತುಗಳು**

1. ಎಲ್ಲಾ ಅಭ್ಯರ್ಥಿಗಳು ಕನ್ನಡ ಬರೆಯಲು, ಓದಲು, ಮಾತನಾಡಲು ಮತ್ತು ಅರ್ಥಮಾಡಿಕೊಳ್ಳಲು ಬಲ್ಲವರಾಗಿರಬೇಕು.
2. ನಿಗದಿಪಡಿಸಿದ ವಿದ್ಯಾರ್ಹತೆ ಕನಿಷ್ಠ ಅವಶ್ಯಕತೆಯಾಗಿದ್ದು ಇದು ಕೇವಲ ಸ್ವಾಮ್ಯತೆಯಾಗಿದ್ದು ಇದನ್ನು ಹೊಂದಿದ್ದಲ್ಲಿ ದಾಖಲಾತಿ ಪರಿಶಿಲನೆಗೆ/ಸಂದರ್ಶನ/ಆಯ್ಕೆಗೆ ಪರಿಗಣಿಸಲೇಬೆಕೆಂದೇನೂ ಇಲ್ಲ.
3. ಈ ಉದ್ಯೋಗ ಅಧಿಸೂಚನೆಯಲ್ಲಿ ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯ ನಂತರ ಪಡೆದ ಅನುಭವವನ್ನು ಮಾತ್ರ ಈ ಹುದ್ದೆಗಳಿಗೆ ನಿಗದಿ ಪಡಿಸಿದ ಅನುಭವವೆಂದು ಪರಿಗಣಿಸಲಾಗುವುದು ಮತ್ತು ನಿಗದಿ ಪಡಿಸಿದ ಕನಿಷ್ಠ ಅನುಭವಹೊಂದಿರತಕ್ಕದ್ದು.
4. ಅರ್ಜಿಗಳನ್ನು ಆನ್ ಲೈನ ಮೂಲಕ ಸಲ್ಲಿಸದೆ ಇತರೆ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ.
5. ಅಭ್ಯರ್ಥಿಗಳು ಅಥವಾ ಅಭ್ಯರ್ಥಿಗಳ ಪರವಾಗಿ ಆಯ್ಕೆ ಅಥವಾ ನೇಮಕಾತಿಗೆ ಸಂಬಂಧಿಸಿದಂತೆ ರಾಜಕೀಯ ಅಥವಾ ಇತರೆ ಹೊರಗಿನ ಪ್ರಭಾವವನ್ನು ತಂದಲ್ಲಿ ನೇಮಕಾತಿ ಪ್ರಕ್ರಿಯೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
6. ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಂದರ್ಶನ/ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡು ಬಂದಲ್ಲಿ ಅವನು/ಅವಳನ್ನು ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

**IV. ಆಯ್ಕೆ**

1. ಅಭ್ಯರ್ಥಿಗಳು ಆನ್ ಲೈನ ನಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು, ಮತ್ತು ಅದೇ ಅರ್ಜಿಯ ಮುದ್ರಣವನ್ನು ತೆಗೆದುಕೊಂಡು ಎಲ್ಲಾ ಸಂಬಂಧಿತ ಪ್ರಮಾಣಪತ್ರಗಳ ಪ್ರತಿಗಳ ಜೊತೆಗೆ ನಿಗದಿತ ಸಮಯದೊಳಗೆ ಸಂಸ್ಥೆಗೆ ಸಲ್ಲಿಸಬೇಕು, ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಅನುಭವಕ್ಕೆ ಪೂರಕವಾಗಿ ಅವಶ್ಯ ದಾಖಲೆಗಳ ಪ್ರತಿಗಳನ್ನು ಲಗತ್ತಿಸತಕ್ಕದ್ದು ಹಿಗೆ ಸಲ್ಲಿಸಲು ವಿಫಲರಾದಲ್ಲಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ್ದರೂ ಸಹ ಅಂಥವರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
2. ಅರ್ಹತೆಯ ಆಧಾರದ ಮೇಲೆ shortlist ಆದ ಅಭ್ಯರ್ಥಿಗಳನ್ನು ಮಾತ್ರ ಮೂಲ ದಾಖಲಾತಿ ಪರಿಶೀಲನೆಗಾಗಿ ಕಯೆಯಲಾಗುವುದು
3. ಮೂಲ ದಾಖಲಾತಿ ಪರಿಶೀಲನೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಹಾಜರಾಗಲು ಅನುಮತಿ ಕೊಡಲಾಗುವುದು.
4. ಅಧಿಕೃತ ಸಕ್ಷಮ ಪ್ರಾಧಿಕಾರಿಯಿಂದ ರಚಿಸಲಾದ ತಾಂತ್ರಿಕ ಅಧಿಕಾರಿಗಳನ್ನೊಳಗೊಂಡ ಸಮಿತಿಯಿಂದ ಸಂದರ್ಶನ ನಡೆಸಲಾಗುವುದು
5. ಸಂದರ್ಶನದಲ್ಲಿ shortlist ಆದ ಅಭ್ಯರ್ಥಿಗಳನ್ನು ಮಾತ್ರ ಪ್ರಾಯೋಗಿಕ ಲಿಖಿತ ಪರಿಕ್ಷೇಗಾಗಿ ಕರೆಯಲಾಗುವುದು.
6. ಕೇವಲ ಪ್ರಾಯೋಗಿಕ ಲಿಖಿತ ಪರಿಕ್ಷೇಯಲ್ಲಿನ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

## V. ಇತರೆ

1. ಅರ್ಜಿಯೊಂದಿಗೆ ಅರ್ಹತೆ ಮತ್ತು ಸಂಬಂಧಿತ ಅನುಭವವನ್ನು ಬೆಂಬಲಿಸುವ ದಾಖಲೆಗಳನ್ನು ಕಳುಹಿಸಬೇಕು. ಅರ್ಜಿಯೊಂದಿಗೆ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ನೇಮಕಾತಿ ಪ್ರಕ್ರಿಯೆಯಿಂದ ಯಾವುದೇ ಹಂತದಲ್ಲಿ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
2. ಈ ಅಧಿಸೂಚನೆಯಲ್ಲಿ ಸೂಚಿಸಲಾದ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿರುತ್ತವೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಬೆ.ಮೆ.ರೈ.ನಿ ನಿಯಮಿತವು ದೃಢಿಕರಿಸಿ ಅಧಿಸೂಚಿಸಿರುವ ಹುದ್ದೆಗಳನ್ನು ರದ್ದುಗೊಳಿಸುವ ಹಕ್ಕನ್ನು ಸಹ ಹೊಂದಿದೆ ಮತ್ತು ಅಂತಹ ತೀರ್ಮಾನವು ಅಂತಿಮವಾಗಿದೆ.
3. ಬೆ.ಮೆ.ರೈ.ನಿ ನಿಯಮಿತವು ಆಯ್ಕೆಯಾದ ಅಭ್ಯರ್ಥಿಗಳನ್ನುಕಾಲಕಾಲಕ್ಕೆ ದೈಹಿಕ ಪರಿಕ್ಷೇಗೆ ಒಳಪಡಿಸುವ ಹಕ್ಕನ್ನು ಹೊಂದಿದೆ.
4. ಸಂಪೂರ್ಣ ನೇಮಕಾತಿ ಪ್ರಕ್ರಿಯೆಯ ಸಮಯದಲ್ಲಿ ಮತ್ತು ಪ್ರಯಾಣದ ಸಮಯದಲ್ಲಿ ಯಾವುದೇ ಅಭ್ಯರ್ಥಿಗೆ ಯಾವುದೇ ಹಾನಿ / ಗಾಯ ಅಥವಾ ನಷ್ಟಕ್ಕೆ ಬೆ.ಮೆ.ರೈ.ನಿ ನಿಯಮಿತವು ಹೊಣೆಗಾರರಾಗುವುದಿಲ್ಲ.
5. ಅಭ್ಯರ್ಥಿಗಳು ದಾಖಲಾತಿ ಪಪಿಶೀಲನೆಗೆ/ಸಂದರ್ಶನಕ್ಕೆ/ಪ್ರಾಯೋಗಿಕ ಪರಿಕ್ಷೇಗೆ ಕರೆದಾಗಲೆಲ್ಲಾ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.
6. ಕೊನೆಯ ಗಳಿಗೆಯ ಯಾವುದೇ ತೊಂದರೆಗಳಿಂದ ತಪ್ಪಿಸಲು ಅಭ್ಯರ್ಥಿಗಳು ಮುಂಚಿತವಾಗಿಯೇ ಆನ್ ಲೈನ ಮೂಲಕ ಅರ್ಜಿ ಸಲ್ಲಿಸಲು ಸಲಹೆ ನೀಡಲಾಗುತ್ತದೆ. ಕೊನೆಯ ಗಳಿಗೆಯಲ್ಲಿ ಆದ ಯಾವುದೇ ತಾಂತ್ರಿಕ ಸಮಸ್ಯೆಗಳು / ಸರ್ವರ್ ಸಮಸ್ಯೆಗಳಿಗೆ ನಿಗಮವು ಜವಾಬ್ದಾರವಾಗುವುದಿಲ್ಲ.

## VI. ಅರ್ಜಿಗಳ ಸ್ವೀಕರಿಸಲು ಕೊನೆಯ ದಿನಾಂಕ

ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು **"ಪ್ರಧಾನ ವ್ಯವಸ್ಥಾಪಕರು (ಮಾನವ ಸಂಪನ್ಮೂಲ), ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, 3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು 560027 "** ಅವರಿಗೆ ಖುದ್ದಾಗಿ/ಯಾವುದೇ ವ್ಯಕ್ತಿಯ ಮುಖಾಂತರ/ಅಂಚೆಯ ಮೂಲಕ ಅಥವಾ ಕೋರಿಯರ್ ಮುಖಾಂತರ ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ "------- ಹುದ್ದೆಗೆ ಅರ್ಜಿ" ಎಂದು ಬರೆಯತಕ್ಕದ್ದು. ಅರ್ಜಿಗಳನ್ನು ದಿನಾಂಕ 20 ಸಪ್ಟೆಂಬರ್ 2017 ರಂದು ಮಧ್ಯಾನ್ಹ 4.00 ಗಂಟೆಯ ವರೆಗೆ ಮಾತ್ರ ಸ್ವೀಕರಿಸಲಾಗುವುದು.

Sd/-

**ಪ್ರಧಾನ ವ್ಯವಸ್ಥಾಪಕರು (ಮಾನವ ಸಂಪನ್ಮೂಲ)**